ದಿನಾಂಕಃ **12-03-2024** ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ

ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ ನನ್ನ ಸ್ವಂತ ಅಣ್ಣ. ಆರೋಪಿ ನನಗೆ ದಾರಿ ಬಂದ್ ಮಾಡಿದ್ದರಿಂದ ಈ ಪ್ರಕರಣ ದಾಖಲಿಸಿರುತ್ತೇನೆ. ಸದರಿ ದಾರಿಯಲ್ಲಿ ಹಾಯ್ದಾಡಲು ನನಗೆ ಹಕ್ಕು ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿರುತ್ತೇನೆ. ಆರೋಪಿ ನನಗೆ ದಾರಿ ಮಧ್ಯ ಹಾಯ್ದಾಡಲು ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ.

ನನ್ನ ಮತ್ತು ಆರೋಪಿತನ ಮಧ್ಯ ಅಸಲು ದಾವೆ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಸದರಿ ದಾವೆಗೆ ಅನುಕೂಲವಾಗಲೀ ಎಂದು ಆರೋಪಿತ ವಿರುದ್ದ ಪ್ರಸ್ತುತ ಖೋಟ್ಟಿ ಪಿರ್ಯಾದು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಆರೋಪಿತನ ಮಧ್ಯ ಹಿರಿಯರಿಂದ ಬಂದ ಆಸ್ತಿಗಳ ಕುರಿತು ಪಾಲು ವಾಟ್ನಿ ಆಗಿದೆ. ನನ್ನ ಮತ್ತು ಆರೋಪಿತನ ಜಮೀನಿನ ಸರ್ವೆ ನಂಬರ ಒಂದೇ ಎಂದರೆ ಸರಿ. ಸದರಿ ದಾರಿ ಆರೋಪಿತನ ಜಮೀನಿನಲ್ಲಿದೆ ಎಂದರೆ ಸರಿ , ಮುಂದುವರೆದು ಸಾಕ್ಷಿ ಆರೋಪಿ ಸದರಿ ದಾರಿ ತನಗೆ ಬರೆದುಕೊಟ್ಟಿದ್ದಾರೆ ಎಂದು ಹಾಗೂ ಈಗ ತಾನು ಅದೇ ದಾರಿಯಿಂದ ಓಡಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಮುಂದುವರೆದು ಸಾಕ್ಷಿ 1997 ರಿಂದ 2013 ಸಾಲಿನವರೆಗೆ ಸದರಿ ದಾರಿಯನ್ನು ಉಪಯೋಗಿಸಿಕೊಂಡಿದ್ದು, ಆರೋಪಿ 2013 ರಿಂದ ತಕರಾರು ಮಾಡುತ್ತಾ ಇದ್ದಾನೆ ಎಂದು ನುಡಿಯುತ್ತಾರೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ನನಗೆ ಯಾವುದೇ ರೀತಿ ತೊಂದರೆ ಕೊಡದೇ ಇದ್ದರೂ ಸಹಿತ ಆತನಿಗೆ ತೊಂದರೆ ಕೊಡಲು ಸುಳ್ಳು ಪಿರ್ಯಾದಿ ದಾಖಲಿಸಿ , ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ /-
ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ